ದಿನಾಂಕಃ18.06.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಕೆ ವಿ ಡಿ ವಕೀಲರಿಂದಃ**

ಮತ ಕೇಂದ್ರದಲ್ಲಿ ಮತ ಎಣಿಕೆಗೆ ಯೋಗ್ಯವಾದ ಮತಗಳು 455 ಎಂದರೆ ನಿಜ. ಮೂರು ಅಭ್ಯರ್ಥಿಗಳಿಗೆ ಬಂದ ಯೋಗ್ಯವಾದ ಮತಗಳನ್ನು ಹೋಲಿಸಿದಾಗ 3 ಮತಗಳ ವ್ಯತ್ಯಾಸವಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮತದಾರರು ಒಂದು ಮತವನ್ನಾದರೂ ಹಾಕಬಹುದು ಅಥವಾ 2 ಮತವನ್ನಾದರೂ ಹಾಕಬಹುದು ಆದ್ದರಿಂದ ಮತಗಳೇ ಬೇರೆ ಮತ ಪತ್ರಗಳೇ ಬೇರೆ ಎಂದು ನುಡಿಯುತ್ತಾರೆ. ಈ ರೀತಿ ಮತಗಳಲ್ಲಿ ಹೋಲಿಕೆ ಇದ್ದರೂ ಕೂಡ 4 ನೇ ಎದುರುದಾರರು ನನ್ನನ್ನು ಕಾನೂನು ಬಾಹಿರವಾಗಿ ವಿಜೇತ ಎಂದು ಘೋಷಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿರುವ ಮತಗಳನ್ನು ಎಣಿಕೆ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಮತ್ತು 4 ನೇ ಎದುರುದಾರರು ಶರೀಕಾಗಿ ಚುನಾಣೆಯಲ್ಲಿ ನನ್ನನ್ನು ಗೆಲುವಿನ ಅಭ್ಯರ್ಥಿ ಎಂದು ಪೋಷಣೆ ಮಾಡಿದ್ದಾರೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು